ನೀವು ಇದೇ ರೀತಿ ನಿರ್ಣಯ ಕೊಡಿ ಅಂತ ಡೈರೆಕ್ಷನ್ ಕೊಡುವ ಅಧಿಕಾರ ಸಹಿತ ನನಗಿಲ್ಲ. ಈವನ್ ಹೈಕೋರ್ಟ್‌ಗೆ ಕೂಡ ರಿಟ್ ಹೋಗಬಹುದೇ ಹೊರತು, ಮೆರಿಟ್ ಮೇಲೆ ಡಿಸೈಡ್ ಮಾಡುವ ಹಕ್ಕನ್ನು ಕಿತ್ತುಕೊಂಡು ಭೂಸುಧಾರಣಾ ಕಾಯಿದೆಯಲ್ಲಿ ನಾವು ಕೊಟ್ಟಿದ್ದೇವೆ. ಬಹುಶಃ ಈ ಪ್ರಗತಿಪರ ಕಾನೂನು ಇಡೀ ಭಾರತ ದೇಶದಲ್ಲೇ ಇದು ಮೊದಲನೆಯದು ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಟ್ರಿಬ್ಯುನಲ್ ಮಾಡಿದಂಥ ಸರ್‌ಪ್ಲಸ್ ಲ್ಯಾಂಡ್ ಅಂತ ಏನು ಡಿಟರ್‌ಮಿನ್ ಮಾಡಿದೆ ಅದನ್ನು ನಾನು ಹೇಳಿದೆ; ಸುಮಾರು ಡಿಟರ್‌ಮಿನ್ ಮಾಡಿದ್ದು 2,73,613 ಎಕರೆ ಇದೆ ಅಂತ. ಇಷ್ಟಿದ್ದರೂ ಕೂಡ ಕೆಲವು ಜನ ಮಿಸ್‌ರೆಪ್ರಸೆಂಟ್ ಮಾಡಿ ಅಥವಾ ಬೇನಾಮಿ ವ್ಯವಹಾರ ಮಾಡಿ ಬೇರೆಯವರು ಹೆಸರಿನಿಂದ ಡಿಕ್ಲರೇಷನ್ ಕೊಟ್ಟು ಮಾಡಡಿದ್ದಾರೆಂಬುದು ನಮ್ಮ ಗಮನಕ್ಕೂ ಬಂದಿದೆ ಮತ್ತು ಅನೇಕ ಸದಸ್ಯರ ಗಮನಕ್ಕೂ ಬಂದಿರಬಹುದು. ಅದಕ್ಕಾಗೇ ನಾನು ಇವತ್ತು ಒಂದು ಹೊಸ ತಿದ್ದುಪಡಿಯನ್ನು ಈ ಮನೆಯ ಮುಂದೆ ಮಂಡಿಸಿದ್ದೇನೆ. ಅಂದರೆ ಯಾವನೇ ಒಬ್ಬ ಡಿಕ್ಲರೆಂಟ್ ``Tribunals are empowered to review their own orders *suo-moto* or otherwise after such enquiry as it considers necessary that an order under Section 67 has been obtained by fraud, mis-representation or suppression of facts or by furnishing false information, incorret or incomplete declaration within a period of two years from the date of such order. The time for taking up such review had been extended from time to time lastly til! 31.3.83." ಅದನ್ನು ನಾನು ಈ ಕಾನೂನಿನಲ್ಲಿ ಎಕ್ಸ್‌ಟೆಂಡ್ ಮಾಡಿ 31-12-1995 ಮಾಡಿದ್ದೇನೆ ಅಂದರೆ ಯಾವುದೇ ಫ್ರಾಡ್, ಮಿಸ್‌ರೆಪ್ರೆಸೆಂಟೇಷನ್ ಆಗಲಿ, ಸಪ್ರಷನ್ ಆಫ್ ಫ್ಯಾಕ್ಟ್ ಆಗಲೀ ಅವನು ಫರ್ನಿಷ್ ಮಾಡಿದ್ದರೆ ಅಂಥಹ ಎಲ್ಲಾ ಕೇಸ್‌ಗಳನ್ನು ಪುನಃ ರಿವ್ಯೂ ಮಾಡುತ್ತೇವೆ.

ಉಡುಪಿ ತಾಲ್ಲೂಕು ಹಂಗಾರಕಟ್ಟೆ ಬಂದರಿನಲ್ಲಿ ಜಟ್ಟಿ ನಿರ್ಮಾಣ

446 (2233) ಶ್ರೀ ಪಿ. ಬಸವರಾಜ (ಬ್ರಹ್ಮಾವರ)-

ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ಉಡುಪಿ ತಾಲ್ಲೂಕು ಹಂಗಾರಕಟ್ಟೆ ಬಂದರಿನಲ್ಲಿ ಜಟ್ಟಿ ನಿರ್ಮಿಸುವ ಕುರಿತಂತೆ ಈ ಪರಿಸರದ ನಾಗರೀಕರು ಸತತವಾಗಿ ಒತ್ತಾಯಿಸಿಗುವುದು ಇಲಾಖೆಗೆ ತಿಳಿದಿದೆಯಲ್ಲವೆ;

ಆ) ಈ ಸಂಬಂಧ ಮೀನುಗಾರಿಕಾ ಇಲಾಖೆಯ ನಿರ್ದೇಶಕರಿಂದ ಪ್ರಸ್ತಾವನೆ ಸರ್ಕಾರಕ್ಕೆ ತಲುಪಿದೆಯೆ ;

ಇ) ತಲುಪಿದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಈ ಬಂದರಿನ ಜಟ್ಟಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎ. ಎಂ. ಬೆಳ್ಳಿಯಪ್ಪ:(ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು.)-

ಅ) ಹೌದು.

ಆ) ಹೌದು.

ಇ) ಈ ವಿಷಯ ಪರಿಶೀಲನೆಯಲ್ಲಿದೆ. ಈ ಕೆಲಸವನ್ನು ಕೇಂದ್ರ ಪುರಸ್ಕೃತ

ಯೋಜನೆಯಡಿಯಲ್ಲಿ ತೆಗೆದುಕೊಳ್ಳಬೇಕಾಗಿರುವುದರಿಂದ ಕೇಂದ್ರ ಸರ್ಕಾರದ ಅನುಮತಿ ಬೇಕಾಗಿದೆ.

ಈ) ಕೇಂದ್ರ ಸರ್ಕಾರದ ಅನುಮತಿ ದೊರೆತೊಡನೆ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಪಿ. ಬಸವರಾಜ್:- ಅಧ್ಯಕ್ಷರೇ, ನಮ್ಮ ಉಡುಪಿ ತಾಲ್ಲೂಕಿನ ಹಂಗಾರಕಟ್ಟೆ ಬಂದರಿನಲ್ಲಿ ಜಟ್ಟಿ ನಿರ್ಮಿಸುವ ಬಗ್ಗೆ ಸಚಿವರನ್ನು ಪ್ರಶ್ನೆ ಕೇಳಿದ್ದೆ. ಅವರು ಇದನ್ನು ಕೇಂದ್ರದ ಪುರಸ್ಕೃತ ಯೋಜನೆ ಅಡಿಯಲ್ಲಿ ತೆಗೆಸುರೊಳ್ಳಬೇಕಾಗಿರುವುದರಿಂದ ಕೇಂದ್ರದ ಅನುಮತಿ ಬೇಕಾಗಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ. ಆ ದಿಸೆಯಲ್ಲಿ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಮತ್ತು ಯಾವಾಗ ಕೇಂದ್ರ ಸರ್ಕಾರದ ಅನುಮತಿ ಸಿಗಬಹುದು ಮತ್ತು ಇದಕ್ಕೇನಾದರೂ ಎಸ್ಟಿಮೇಷನ್ ಆಗಿದೆಯೇ ಎಂಬ ಬಗ್ಗೆ ಕೇಳಬಯಸುತ್ತೇನೆ.

SRI A. M. BELLIYAPPA :- Madam Speaker, recently I visited Hangarkatte along with my friend Mr. Basavaraj. The plan survey is done, estimation and survey report has been submitted to the Planning Department and the State Planning Derpartment has accepted and approved that , It is now being referred to the Finance Department and it is now pending before the Finance Department. And even after it is being approved, it must be sent to Central Government because, fifty percent of the project cost will be shared by the Central government . So, immediately after getting the sanction from the Central Government , we are taking up this project and the Government is convinced that this Project is very much essential to Hangarkatte and it has got a great potentiality also.

ಶ್ರೀ ಪಿ. ಬಸವರಾಜ್:- ಮಾನ್ಯ ಸಚಿವರು ಕೊಟ್ಟ ಉತ್ತರ ಸತ್ಯ ಇದೆ. ಅವರೂ ಕೂಡ ಆ ಸ್ಥಳಕ್ಕೆ ಬಂದು ಸ್ವತಃ ನೋಡಿದ್ದಾರೆ ಅದಕ್ಕಾಗಿ ಸಚಿವರಿಗೆ ಧನ್ಯವಾದ ಅರ್ಪಿಸುತ್ತೇನೆ. ಆದರೆ ಇದು ಸುಮಾರು 50ಲಕ್ಷದ ಪ್ರಾಜೆಕ್ಟ್ ಇದನ್ನು ಸರ್ಕಾರದ ವತಿಯಿಂದ ಪ್ರಾರಂಭಮಾಡಿ ಕೇಂದ್ರದ ಅನುಮತಿಗೆ ಕಾಯದೆ ಕೂಡಲೇ ಕಾರ್ಯರಂಭ ಮಾಡಿ ಜನರಿಗೆ ಆ ಸೌಲಭ್ಯ ಒದಗಿಸಬೇಕೆಂದು ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

SRI A. M. BELLIYAPPA :- This is the project costing about Rs. 47 lakhs and as I had already said 50 per cent of the cost is borne by the Central Government . If we do not get the acceptance from the Central Government , it is very difficult to get the amount shared by the Central Government. Under the circumstances , it is very necessary that it should be sent to Central Government and the Central Government should

approve it and then only we can take action and I assure my friend Mr. Basavaraj that I will see that it is processed very early by the Central Government also.

ಬರಪೀಡಿತ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಪರಿಹಾರ ಕಾರ್ಯಕ್ರಮ.

447 (1929) ಶ್ರಿ ಎನ್. ಜಿ. ನಾಯ್ಕ (ಮೊಳಕಾಲ್ಮೂರು) :

ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;-

ಅ) ಮೊಳಕಾಲ್ಮೂರು ತಾಲ್ಲೂಕು ಪದೇ ಪದೇ ಬರಗಾಲಕ್ಕೆ ತುತ್ತಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಪರಿಹಾರಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮವೇನು ;

ಇ) ಹಾಗಿದ್ದರೆ ಯಾವಾಗ ಅದನ್ನು ಪ್ರಾರಂಭ ಮಾಡಲಾಗುವುದು ;

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) ಹೌದು .

ಆ) ಈ ಪ್ರದೇಶದಲ್ಲಿ ಕುಡಿಯುವ ನೀರಿನ ಪೂರೈಕೆ ಮತ್ತು ಕೃಷಿ ಕಾರ್ಮಿಕರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮಗಳನ್ನು ತೀವ್ರಗತಿಯಲ್ಲಿ ಪೂರೈಸಲಾಗಿದೆ.

ಇ) ಕಳೆದ ವರ್ಷ ನವಂಬರ್ ತಿಂಗಳವರೆಗೆ ಸಾಕಷ್ಟು ಮಳೆಯಾಗಿರುತ್ತದೆ; ಆದರೆ ಕುಡಿಯುನ ನೀರಿನ ತೀವ್ರ ಸಮಸ್ಯೆಯಿರುನ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸಲು ಕೊಳವೆ ಬಾವಿಗಳನ್ನು ತೋಡಲು ಕ್ರಮ ಕೈಗೊಂಡಿದೆ.

ಶ್ರಿ ಎನ್. ಬಿ. ನಾಯಕ್:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಉತ್ತರವೇನೋ ಸನ್ಮಾನ್ಯ ಸಚಿವರಿಂದ ಬಂದಿದೆ. ನಾನು ಮೊಳಕಾಲ್ಮೂರು ತಾಲ್ಲೂಕು ಪದೇ ಪದೇ ಬರಗಾಲಕ್ಕೆ ತುತ್ತಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ``ಹೌದು" ಎಂದು ಹೇಳಿದ್ದಾರೆ. ಸುಮಾರು ಹತ್ತಾರು ವರ್ಷಗಳಿಂದ ನಾನು ಮೂರು ಸಾರಿ ಈ ಸದನದಲ್ಲಿಯೇ ಇದನ್ನು ಕೇಳಿದ್ದೇನೆ, ಹೌದು ಎಂದು ಹೇಳಿದ್ದಾರೆ. ಹೌದು ಎಂದರೆ ಯಾವಾಗ ? ಅದಕ್ಕೆ ಏನಾದರೂ ಪರಿಹಾರವಿದೆಯೇ ? ಅದನ್ನು ಯಾವಾಗ ಮಾಡುತ್ತೀರಿ ಅದರ ಬಗ್ಗೆ ಸರ್ಕಾರದವರು ಉತ್ತರವನ್ನು ಹೇಳಬೇಕು.

ಶ್ರಿ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷಿಣಿಯವರೇ, ಈಗ ಬರಗಾಲಕ್ಕೆ ಇದು ತುತ್ತಾಗುತ್ತಿದೆಯೇ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳಿದಾಗ ಹೌದು ಎಂದು ಹೇಳಿದೆ. ಆದರೆ ಈಗ ನಮ್ಮ ಅಧೀನದಲ್ಲಿರತಕ್ಕಂಥ ಕೆಲವು ಕೆಲಸಕಾರ್ಯಗಳನ್ನು ಆಗಾಗ್ಗೆ ನಾವು ತೆಗೆದುಕೊಳ್ಳುತ್ತೇವೆ. ಉದಾಹರಣೆಗೆ ಡ್ರಿಂಕಿಂಗ್ ವಾಟರ್ ಸಮಸ್ಯೆ ಇದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು ಇದೆ ಮತ್ತು ಸ್ಕೇರ್‌ಸಿಟಿಯಲ್ಲಿ ಕೆಲಸ ತೆಗೆದುಕೊಳ್ಳತಕ್ಕಂಥದ್ದು ಇದೆ. ಈ ರೀತಿಯ ರಿಲೀಫ್ ಕೆಲಸಗಳನ್ನು ನಾವು ಮಾಡಬಹುದು . ಆದರೆ ಪರ್ಮನೆಂಟ್ ಡೆವಲಪ್‌ಮೆಂಟಲ್ ವರ್ಕ್ಸ್‌ನ್ನು ಮಾಡಲು ನೀರಾವರಿ ಇಲಾಖೆ ಇದೆ; ಮೈನರ್ ಇರಿಗೇಷನ್ ಡಿಪಾರ್ಟ್‌ಮೆಂಟ್ ಇದೆ , ಅಗ್ರಿಕಲ್ಚರ್ ಡಿಪಾರ್ಟ್‌ಮಂಟ್ ಇದೆ , ಸಾಯಿಲ್ ಕನ್ಸರ್ವೇಷನ್ ಇಲಾಖೆ ಇದೆ. ಈ ರೀತಿ ಇದ್ದರೂ ಕೂಡ ಜನ ತೊಂದರೆಯಲ್ಲಿದ್ದಾಗ ನಾವು ಆ ತಕ್ಷಣದಲ್ಲಿ ಸ್ವಲ್ಪ ರಿಲೀಫ್‌ನ್ನುಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ ಮತ್ತು ಈ ಇಲಾಖೆಯು ಅವರ ಒಂದು ಸಹಾಯಕ್ಕಾಗಿ ಬರುತ್ತದೆ . ಆದರೆ ನಾನು ನಾಯಕರಲ್ಲಿ